

ಎಲ್ಲೂ ಪಾತ್ರಗಳು ಬದಲಾಗಿಲ್ಲ, ಕಲ್ಪನೆಗಳು ಬದಲಾಗಿಲ್ಲ, ಎಲ್ಲವೂ ನದಿಯಂತೆ ಸಲೀಸು ಎನ್ನುತ್ತಾರೆ ಪುರಾಣಪ್ರಿಯರು.

ಇನ್ನು 'ಶಿವಪುರಾಣ' ವಿಷ್ಣುವನ್ನು ಗೇಲಿಮಾಡುತ್ತದೆ. ಸಮುದ್ರಮಥನವಾದ ನಂತರ ವಿಷ್ಣು ದಾನವರನ್ನು ಹುಡುಕುತ್ತ ಪಾತಾಳಕ್ಕೆ ಬರುತ್ತಾನೆ. ಅಲ್ಲಿ ಸುಂದರ ಸ್ತ್ರೀಯರಲ್ಲಿ ಮೋಹಗೊಂಡು ಅಲ್ಲೇ ಉಳಿದುಬಿಡುತ್ತಾನೆ. ಮಕ್ಕಳು ಹುಟ್ಟುತ್ತಾರೆ, ಅವರೋ ಮಹಾ ಘಟಿಂಗರು. ದೇವತೆಗಳನ್ನು ಸ್ವರ್ಗದಲ್ಲೂ ಪೀಡಿಸುತ್ತಾರೆ. ಇವರ ಕಾಟ ತಡೆಯಲೆಂದು ಶಿವ, ವೃಷಭರೂಪ ತಳೆದು ಪಾತಾಳಕ್ಕೆ ಇಳಿದಾಗ, ಸ್ತ್ರೀಲೋಲನಾಗಿ ವಿಷ್ಣು ಮೈಮರೆತಿರುತ್ತಾನೆ. ವೃಷಭದ ಮೇಲೆ ವಿಷ್ಣು ಬಾಣದ ಮಳೆಗರೆಯುತ್ತಾನೆ. ಶಿವ ಅವೆಲ್ಲವನ್ನೂ ನುಂಗಿಹಾಕಿಬಿಡುತ್ತಾನೆ. ಆ ವೃಷಭ, ಶಿವನಲ್ಲದೆ ಬೇರಾರೂ ಅಲ್ಲ ಎಂದು ತಿಳಿದು ವಿಷ್ಣು ಶರಣಾಗುತ್ತಾನೆ. ಶಿವನೊಡನೆ ಮೇಲೆ ಬರುವಾಗ ತನ್ನ ಚಕ್ರವನ್ನೇ ಮರೆತುಬಿಡುತ್ತಾನೆ. ಕನಿಕರಗೊಂಡ ಶಿವ ಬೇರೊಂದು ಚಕ್ರವನ್ನು ದಯಪಾಲಿಸುತ್ತಾನೆ. ವಿಷ್ಣುಭಕ್ತರನ್ನು ಗೇಲಿ ಮಾಡಲೆಂದೇ 'ಶಿವಪುರಾಣ' ರಚನೆಯಾದಂತಿದೆ. ಪುರಾಣವೆಂದರೆ ನಮ್ಮ ಈಗಿನ ಮಾತಿನಲ್ಲಿ ಅದು ಸದರದ ಮಾತು. 'ಕಂತೆ ಪುರಾಣ' ಎಂಬ ಔದಾಸೀನ್ಯವನ್ನು ಈ ಕುರಿತು ಕಾಣಬಹುದು.

ಆಕಾಶದಂತೆ ಪಾತಾಳವೂ ನಮ್ಮ ದೃಷ್ಟಿಗೆ ನಿಲುಕಿದ್ದರೆ ಬಹುಶಃ ಇಷ್ಟೊಂದು ಕಲ್ಪನೆಗಳು ಅರಳುತ್ತಿರಲಿಲ್ಲ. ದೃಷ್ಟಿಗೆ ಗೋಚರಿಸುವುದಕ್ಕಿಂತ ಗೋಚರಿಸದಿರುವ ಕಡೆಗೇ ನಮ್ಮ ಗಮನ. ಆಕಾಶಕಾಯಗಳನ್ನು ಬರಿಗಣ್ಣಿನಿಂದಲೇ ವೀಕ್ಷಿಸಿ ದಾಖಲಿಸಿದ ನಮ್ಮ ಪ್ರಾಚೀನರು ಸೂರ್ಯ–ಚಂದ್ರರ ಚಲನೆಯನ್ನು, ಋತುಮಾನಗಳ ಬದಲಾವಣೆಯನ್ನೂ ಸುದೀರ್ಘವಾಗಿ ವೀಕ್ಷಿಸಿ ದಾಖಲಿಸಿದ್ದರು. ಅದು ಒಂದು ಕಾಲದಲ್ಲಿ ಆದ ಜ್ಞಾನದ ಸ್ಫೋಟವಲ್ಲ, ಭಾರತೀಯರಿಗೆ ಇವೆಲ್ಲವೂ ವೇದಗಳ ರೂಪದಲ್ಲಿ ಲಭ್ಯವಾಗಿವೆ. ಮೊದಲ ಬಾರಿಗೆ ಅಥರ್ವ ವೇದದಲ್ಲಿ (ರಚನೆ ಬಹುಶಃ ಕ್ರಿ.ಪೂ. 1600) 27 ನಿತ್ಯನಕ್ಷತ್ರಗಳ ಪಟ್ಟಿಯನ್ನು ಕಾಣಬಹುದು. ಇವೆಲ್ಲ ಬರಿಗಣ್ಣಿಗೆ ಕಂಡ ವಾಸ್ತವ ಚಿತ್ರಣ. ಹಾಗೆಯೇ ಹನ್ನೆರಡು ರಾಶಿಚಕ್ರಗಳು ಕೂಡ ನಮಗೆ ಪೂರ್ವಿಕರಿಂದ

**ಭೂಮಿ ಹೊತ್ತಿರುವ ಆನೆಗಳ ಹೆಸರು ಕುತೂಹಲಕಾರಿಯಾಗಿದೆ. ಅವು ಒಂದೊಂದೂ ಗಂಡು–ಹೆಣ್ಣು ಆನೆಗಳ ಜೋಡಿ.**

ಪೂರ್ವದಲ್ಲಿ ಐರಾವತ–ಅಭ್ರಮು
ಆಗ್ನೇಯದಲ್ಲಿ ಪುಂಡರೀಕ–ಕಪಿಲ
ದಕ್ಷಿಣದಲ್ಲಿ ವಾಮನ–ಪಿಂಗಳ
ನೈಋತ್ಯದಲ್ಲಿ ಕುಮುದ–ಅನುಪಮ
ಪಶ್ಚಿಮದಲ್ಲಿ ಅಂಜನ–ತಾಮ್ರಕರ್ಣಿ
ವಾಯುವ್ಯದಲ್ಲಿ ಪುಷ್ಪದಂತ–ಶುಭ್ರದಂತಿ
ಉತ್ತರದಲ್ಲಿ ಸಾರ್ವಭೌಮ–ಅಂಗದ
ಈಶಾನ್ಯದಲ್ಲಿ ಸುಪ್ರತೀಕ–ಅಂಜನಾವತಿ

